62

# “ದೇವರೇ, ಕನಿಕರ ತೋರು!”

## ಲೂಕ 18:9-14, ಒಂದು ನಿಕಟ ನೋಟ

ಒಬ್ಬ ಪ್ರಸಂಗಿಯು ತನ್ನ ವಿದ್ಯಾರ್ಥಿಗಳಿಗಾಗಿ ಫರಿಸಾಯ ಹಾಗೂ ಸುಂಕದವನ ಸಾಮ್ಯವನ್ನು ಓದಿದಳು:[1]

> ಇದಲ್ಲದೆ ತಾವೇ ನೀತಿವಂತರೆಂದು ತಮ್ಮಲ್ಲಿ ಭರವಸವಿಟ್ಟುಕೊಂಡು ಉಳಿದವರನ್ನು ಉದಾಸೀನಮಾಡುವಂಥ ಕೆಲವರಿಗೆ ಒಂದು ಸಾಮ್ಯವನ್ನು ಹೇಳಿದನು. ಅದೇನಂದರೆ - ಪ್ರಾರ್ಥನೆಮಾಡಬೇಕೆಂದು ಇಬ್ಬರು ಮನುಷ್ಯರು ದೇವಾಲಯಕ್ಕೆ ಹೋದರು; ಒಬ್ಬನು ಫರಿಸಾಯನು, ಒಬ್ಬನು ಸುಂಕದವನು. ಫರಿಸಾಯನು ನಿಂತುಕೊಂಡು ಪ್ರಾರ್ಥಿಸುವಾಗ ತನ್ನೊಳಗೆ ದೇವರೇ, ಸುಲುಕೊಳ್ಳುವವರೂ ಅನ್ಯಾಯಗಾರರೂ ಹಾದರಮಾಡುವವರೂ ಆಗಿರುವ ಉಳಿದ ಜನರಂತೆ ನಾನಲ್ಲ, ಈ ಸುಂಕದವನಂತೆಯೂ ಅಲ್ಲ; ಆದದರಿಂದ ನಿನಗೆ ಸ್ತೋತ್ರಮಾಡುತ್ತೇನೆ. ವಾರಕ್ಕೆ ಎರಡಾವರ್ತಿ ಉಪವಾಸಮಾಡುತ್ತೇನೆ; ನಾನು ಸಂಪಾದಿಸುವ ಎಲ್ಲಾದರಲ್ಲಿಯೂ ಹತ್ತರಲ್ಲೊಂದು ಪಾಲು ಕೊಡುತ್ತೇನೆ ಅಂದುಕೊಂಡನು. ಆದರೆ ಆ ಸುಂಕದವನು, ದೂರದಲ್ಲಿ ನಿಂತು ಆಕಾಶದ ಕಡೆಗೆ ಕಣ್ಣೆತ್ತಿನೋಡುವದಕ್ಕೂ ಮನಸ್ಸಿಲ್ಲದೆ ಎದೆಯನ್ನು ಬಡುಕೊಳ್ಳುತ್ತಾ - ದೇವರೇ, ಪಾಪಿಯಾದ ನನ್ನನ್ನು ಕರುಣಿಸು ಅಂದನು. ಇವನು ನೀತಿವಂತನೆಂದು ನಿರ್ಣಯಿಸಲ್ಪಟ್ಟವನಾಗಿ ತನ್ನ ಮನೆಗೆ ಹೋದನು, ಆ ಫರಿಸಾಯನು ಅಂಥವನಾಗಿ ಹೋಗಲಿಲ್ಲ ಎಂದು ನಿಮಗೆ ಹೇಳುತ್ತೇನೆ. ತನ್ನನ್ನು ಹೆಚ್ಚಿಸಿಕೊಳ್ಳುವ ಪ್ರತಿಯೊಬ್ಬನು ತಗ್ಗಿಸಲ್ಪಡುವನು, ತನ್ನನ್ನು ತಗ್ಗಿಸಿಕೊಳ್ಳುವವನು ಹೆಚ್ಚಿಸಲ್ಪಡುವವನು ಅಂದನು (ಲೂಕ 18:9-14).

ಫರಿಸಾಯನಲ್ಲಿದ್ದಂಥ ಅಹಂಭಾವವನ್ನು ಅನುಕರಣೆ ಮಾಡದೆ, ಸುಂಕದವನ ತಗ್ಗಸುವಿಕೆಯನ್ನು ಅಭ್ಯಾಸಿಸಬೇಕು ಎಂದು ಆ ಬೋಧಕಿ ತಿಳಿಸಿದಳು. ಅದನ್ನು ಹೇಳಿ ಮುಗಿಸಿದ ನಂತರ ಅವರನ್ನು ಪ್ರಾರ್ಥನೆಯಲ್ಲಿ ನಡೆಸಿದಳು: “ದೇವರೇ ನಾವು ಫರಿಸಾಯರಂತೆ ಇರುವದಿಲ್ಲ ನಿನಗೆ ಸ್ತೋತ್ರ ಎಂದಳು ...” ತಾನು ಸರಿಯಾಗಿ ಇರಬೇಕೆಂದಿರುವವರು, ತಾನೇ ಆ ತಪ್ಪನ್ನು ಮಾಡವ ಸಾಧ್ಯತೆಯಿದೆ ಎಂದು ಇದರಿಂದ ತಿಳಿಯಬಹುದಲ್ಲವೇ.

ಚಿಕ್ಕವಿರುವಾಗಲೇ ನಾವುಗಳು ಫರಿಸಾಯನ ಹಾಗೂ ಸುಂಕದವನ ಸಾಮ್ಯವನ್ನು ಕೇಳಿದ್ದೇವೆ ಹೇಗೂ ಇದರಲ್ಲಿರುವ ಸತ್ಯವನ್ನು ಗ್ರಹಿಸಿದ್ದೇವೆ. ಇದರಲ್ಲಿ ಎರಡು ವಿಧವಾದ ಕಥೆಗಳಿವೆ ಈ ಅಧ್ಯಾಯದಿಂದ ಒಂದು ಸವಾಲನ್ನು ಸ್ವೀಕರಿಸುತ್ತೇವೆ ಲೂಕ 18:9-14.

### ಎರಡು ವ್ಯಕ್ತಿತ್ವಗಳು

ಯೇಸುವಿನ ಈ ಸಾಮ್ಯ ಸಹಜವಾಗಿದ್ದರೂ, “ಇದಲ್ಲದೆ ತಾವೇ ನೀತಿವಂತರೆಂದು ತಮ್ಮಲ್ಲಿ ಭರವಸವಿಟ್ಟುಕೊಂಡು ಉಳಿದವರನ್ನು ಉದಾಸೀನಮಾಡುವಂಥ ಕೆಲವರಿಗೆ ಒಂದು ಸಾಮ್ಯವನ್ನು ಹೇಳಿದನು” (ವಚನ 9) ಅಂತ್ಯದಲ್ಲಿ ಅದರ ಸಾರಾಂಶವನ್ನು ತಿಳಿಸಿ: “ತನ್ನನ್ನು ಹೆಚ್ಚಿಸಿಕೊಳ್ಳುವ ಪ್ರತಿಯೊಬ್ಬನು ತಗ್ಗಿಸಲ್ಪಡುವನು, ತನ್ನನ್ನು ತಗ್ಗಿಸಿಕೊಳ್ಳುವವನು ಹೆಚ್ಚಿಸಲ್ಪಡುವನು” ಅಂದನು (ವಚನ 14ಬಿ).[2]

ತನ್ನನ್ನು ಹೆಚ್ಚಿಸಿಕೊಂಡ ವಿಚಾರಕ್ಕೆ ಯೇಸು ಒಬ್ಬ ಫರಿಸಾಯನ ಉದಾಹರಣೆ

ನೀಡಿದನು. ತಗ್ಗಿಸುವಿಕೆಗೆ, ಸುಂಕದವನ ಉದಾಹರಣೆ ನೀಡಿದನು. ಯೆಹೂದ್ಯ ಸಮುದಾಯದಲ್ಲಿ ಇವರಿಬ್ಬರೂ ತೀವ್ರವಾದ ಗುಣವನ್ನು ಹೊಂದಿದ್ದರಿಂದ, ಯೇಸು ಇವರಿಬ್ಬರ ಉದಾಹರಣೆ ನೀಡಿದನು: ಫರಿಸಾಯರು, ಧಾರ್ಮಿಕ, ನೀತಿವುಳ್ಳ, ಸಾಮಾಜಿಕ ಏಣಿಗಳಾಗಿ ದ್ದರು, ಆದರೆ ಸುಂಕದವನು, ಹೀನವಾದ[3] ಸ್ಥಾನವನ್ನು ಹೊಂದಿದ್ದರು. ಅದರ ಆಳವಾದ ಅರ್ಥವನ್ನರಿಯಲು, ಇವರಿಬ್ಬರ ಕುರಿತ ಸಂಗತಿಗಳನ್ನು ನಾವುಗಳು ಅರಿಯಬೇಕು.

**1ನೇ ವ್ಯಕ್ತಿತ್ವ: ಫರಿಸಾಯ**

ಈಗ ನಾವು ಪ್ರಾರಂಭದಿಂದ, ಆರಂಭಿಸೋಣ ಸಾಮ್ಯದ ಪ್ರಥಮ ಪದಗಳು: "ಪ್ರಾರ್ಥನೆ ಮಾಡಬೇಕೆಂದು ಇಬ್ಬರು ಮನುಷ್ಯರು ದೇವಾಲಯಕ್ಕೆ ಹೋದರು" (ವಚನ 10ಎ). ಯಾಕಂದರೆ ದೇವಾಲಯವು "ಪ್ರಾರ್ಥನಾ ಮಂದಿರ"ವೆಂದು ದೇವರು ನಿರ್ಣಯಿಸಿದ್ದನು (ಲೂಕ 19:46).[4] ಯೆಹೂದ್ಯ ಸ್ತ್ರೀ ಪುರುಷರು ಪ್ರಾರ್ಥನೆಗಾಗಿ ಮೂರು ಸಾರಿ ಸೇರಿ ಬರುತ್ತಿದ್ದರು.[5] ಎರಡು ಸಮಯದಲ್ಲಿ ಯಜ್ಞಗಳನ್ನು ಸರ್ಪಿಸುತ್ತಿದ್ದರು. ಸ್ತ್ರೀ ಪುರುಷರಿಬ್ಬರೂ ಪ್ರಾರ್ಥನೆಗಾಗಿ ಅಂಗಳದಲ್ಲಿ ಸೇರಿ ಬಂದರೂ ಆ ಒಳಾಂಗಣದ ಯಜ್ಞವೇದಿಯ ಬಳಿ ಪುರುಷರು ಪ್ರವೇಶಿಸಬಹುದಿತ್ತು.[6] ಆದ್ದರಿಂದ "ಇಬ್ಬರ ಪ್ರಾರ್ಥನೆಗೆ ಹೋದರು ಎಂಬದು ಆಶ್ಚರ್ಯವಲ್ಲ."

ಅವರಿಬ್ಬರಲ್ಲಿ ಒಬ್ಬನು ಫರಿಸಾಯನು (ವಚನ 10ಬಿ), ಅವನು ಪ್ರಾರ್ಥನೆಗೆ ಹೋದದ್ದು ಆಶ್ಚರ್ಯವಲ್ಲ. ಧಾರ್ಮಿಕ ಪದ್ಧತಿಗಳನ್ನು ಅನುಸರಿಸುವಲ್ಲಿ ಫರಿಸಾಯರು ನುರಿತವರಾ ಗಿದ್ದರು.[7]

ಸುವಾರ್ತೆಗಳ ತಜ್ಞರ ಪ್ರಕಾರ ಫರಿಸಾಯರು ಪ್ರಮುಖ ವೈರಿಗಳಾಗಿದ್ದರು.[8] ಈ ಸಾಮ್ಯವನ್ನು ಪೂರ್ಣವಾಗಿ ಅರಿಯಬೇಕೆಂದರೆ, ಫರಿಸಾಯರು ಉತ್ತಮವಾದದ್ದನ್ನು, ಒಳ್ಳೆಯದನ್ನು ಹಾಗೂ ಯೋಗ್ಯವಾದದ್ದನ್ನು ಮಾಡುವವರಾದ್ದರಿಂದ, ಯೆಹೂದ್ಯರು ಅವರನ್ನು ಗೌರವಿಸುತ್ತಿದ್ದರು. ಅವರು ದೇವರ ಸೇವೆ ಮಾಡುವಲ್ಲಿ, "ಪವಿತ್ರವಾದ ಸಂಪ್ರದಾಯಗಳನ್ನು" ಕಾಪಾಡುವದರಲ್ಲಿ ಗಂಭೀರತೆಯನ್ನು ಹೊಂದಿದ್ದು. ಹಳೆಯ ಸಂಗತಿಗಳು ಪ್ರಮುಖವಲ್ಲ ಎಂದು ಹೇಳುವ ಲೋಕದಲ್ಲಿ ಇವರು ಅವುಗಳನ್ನು ಕಾಪಾಡಿದ್ದರು.

ವಚನಗಳು 11, 12ರಲ್ಲಿ, ಸ್ವಯಂ-ಲೆಕ್ಕಾಚಾರವನ್ನು ಗಮನಿಸುತ್ತೇವೆ, ಅವನು ಶಿಸ್ತುಬದ್ಧನಾದ್ದರಿಂದ, ಸುಲುಕೊಳ್ಳುವವನೂ, ಅನ್ಯಾಯಗಾರನೂ ಹಾದರಮಾಡುವವನೂ ಆಗಿರಲಿಲ್ಲ.[9] ಮದುವೆಯ ಬಂದಕ್ಕೆ ಒಳಗಾಗಿದ್ದನು. ಕರ್ತನ ನಿಯಮಗಳ ಪಾಲಕನು ಆಗಿದ್ದನು, ಈಗ ಅವನು ನಿಯಮ ಮೀರಿ ಮಾತಾಡಿದನು:[10] ಶುದ್ಧಪಡಿಸುವ ದಿನದಂದು ಮಾತ್ರ ಒಂದು ದಿನ ಉಪವಾಸ ಮಾಡಬೇಕೆಂದಿದ್ದರೂ (ಯಾಜಕಕಾಂಡ 16:29; 30)[11]; ವರ್ಷಕ್ಕೆ 104 ಸಾರಿ ಉಪವಾಸ ಮಾಡಿದನು (ಪ್ರತಿ ಸೋಮಾವಾರ ಹಾಗೂ ಗುರುವಾರ[12] ನೋಡಿ ಮತ್ತಾಯ 6:16). ನಿಯಮವಾದ ಪ್ರಕಾರ, ಪ್ರತಿವರುಷ ಹೊಲದ ಬೆಳೆಯಲ್ಲಿ, ಧಾನ್ಯ, ದ್ರಾಕ್ಷೆ, ಎಣ್ಣೆ ಇವುಗಳಲ್ಲಿ (ದಶಮ ಭಾಗ) ನೀಡಬೇಕಿತ್ತು (ಧರ್ಮೋಪದೇಶಕಾಂಡ 14:22, 23); ಆದರೆ ಫರಿಸಾಯರು ಹಿತ್ತಲಿನಲ್ಲಿ ಬೆಳೆದ ಮುರಗ ಸೊಪ್ಪಿನಲ್ಲೂ ದಶಮಭಾಗ ನೀಡಿ ದರು (ನೋಡಿ ಮತ್ತಾಯ 23:23).

ಫರಿಸಾಯನು ನೆರೆಯವನಾಗಿರಬೇಕೆಂದು ಪ್ರಾಯಶಃ ನೀವು ಬಯಸಬಹುದು. ಅವನು ಉತ್ತಮವಾದ ಪಟ್ಟಣವಾಸಿ, ಗೌರವಸ್ಥನು, ಕೌಟುಂಬಿಕ ವ್ಯಕ್ತಿ, ಧಾರ್ಮಿಕ ವಿಚಾರದಲ್ಲಿ ಪರಿಪಕ್ವವಾದಿ, ದೇವಾಲಯದಲ್ಲಿ ಅವನನ್ನು ಕಂಡು ನೀನೇನು ಇಲ್ಲಿರುವಿ? ಎಂದರೆ, "ನಾನು ಈ ಸ್ಥಳವಲ್ಲದೆ, ಇನ್ನೆಲಿರಲೀ" ಎಂದು ಅವನು ಹೇಳಬಹುದು. ದೇವಾಲಯದ ಬಾಗಿಲು ತೆರೆದ ತಕ್ಷಣ ಅವನು ಅಲ್ಲಿರುತ್ತಿದ್ದನು ಎಂದು ಈಗ ನಾವು ಹೇಳಬಹುದು. ಆದ್ದರಿಂದ ಅವನು ಪ್ರಾರ್ಥನೆಗೆ ಹೋದದ್ದು ಆಶ್ಚರ್ಯವಲ್ಲ.

**2ನೇ ವ್ಯಕ್ತಿತ್ವ: ಸುಂಕದವನು**

ಸುಂಕದವನು ಪ್ರಾರ್ಥನೆಗೆ ಹೋದದ್ದು ಆಶ್ಚರ್ಯಕರವೇ. ಸುಂಕದವರು ಸಾಮಾನ್ಯವಾಗಿ ದೇವಾಲಯಕ್ಕೆ ಪ್ರಾರ್ಥನೆಗಾಗಿ ಬರುವದಿಲ್ಲ.

KJV ಅನುವಾದದಲ್ಲಿ, ಸುಂಕದವನನ್ನು "ಸಾಮಾನ್ಯ" ವ್ಯಕ್ತಿ ಎನ್ನಲಾಗಿದೆ. ಪ್ರಸ್ತುತ ಅವರನ್ನು KJV "ಸುಂಕ ವಸೂಲಿ ಮಾಡುವವನು"[13] ಎಂದು ಕರೆಯಬಹುದು. ಸರ್ಕಾರದಲ್ಲಿ, "ಭ್ರಷ್ಟಚಾರವಿರುವ" ಇಲಾಖೆಯಲ್ಲಿ ವ್ಯವಹಾರ ಮಾಡುವುದು ಎನ್ನಬಹುದು. ಅಮೇರಿಕದ IRS[14] ಇಲಾಖೆಯನ್ನು ನೆನಪು ಮಾಡಬಹುದು. ಇವರನ್ನು ಸುಂಕದವರಿಗೆ ಹೋಲಿಸ ಬಹುದು.

ಸುಂಕವನ್ನು ಎತ್ತುವದರಲ್ಲಿ ರೋಮಾಯರು ವಿಶಿಷ್ಟ ವಿಧಾನವನ್ನು ಬಳಸುತ್ತಿದ್ದರು. ಕೆಲವು ನಿರ್ದಿಷ್ಟ ಸ್ಥಳಗಳನ್ನು ಗುರುತಿಸಿ, ಅದನ್ನು ಹೆಚ್ಚು ಹರಾಜು ಕೂಗುವವನಿಗೆ ನೀಡುತ್ತಿದ್ದರು. ಒಪ್ಪಂದ ಹಣವನ್ನು ಒಪ್ಪಂದ ಮಾಡಿದವನು ರೋಮಾಯನಿಗೆ ನೀಡಿದ ನಂತರ ಉಳಿದ ಹಣವನ್ನು ಬಿಡ್ಡುದಾರನೇ ಇಟ್ಟುಕೊಳ್ಳಬಹುದಿತ್ತು. ಹರಾಜಿನ ಮಾಹಿತಿಯನ್ನು ನೀಡಲು, ಸುದ್ದಿಮಾಧ್ಯಮವಾಗಲೀ, ದೂರದರ್ಶನವಾಗಲೀ, ರೇಡಿಯೋಗಳು ಇಲ್ಲದೆ ಇದ್ದದರಿಂದ, ಅವರು ನೀಡಬೇಕಾದ ನಿಗದಿತ ಹಣದ ಕಂತನ್ನು ಅವರು ಅರಿತಿದ್ದರು. ಆದ್ದರಿಂದ ಆ ದಿನಗಳ ಸುಂಕದವರು ಬಹಳಷ್ಟು ಲಾಭ ಮಾಡುತ್ತಿದ್ದರು.[15]

ನಿಂದನೆಗೆ, ಇದು ಒಂದು ಸಿದ್ಧವಾದ ಯೋಜನೆಯಾಗಿತ್ತು. ಭ್ರಷ್ಟರಾದ ಸುಂಕದವರು, ನೂರಾರು ವಿಧದಿಂದ, ಜನರಿಂದ ಹಣ ವಸೂಲಿ ಮಾಡುತ್ತಿದ್ದರು. "ಭೂಮಿಯ ಕರವನ್ನು ಸಹ ಎತ್ತುತ್ತಿದ್ದರು ... ವ್ಯಯಕ್ತಿಕರ ಕರ, ಚುನಾವಣಕರ, ಆದು ಹಾಗ ರಫ್ತಿನ ಕರ, ಹಡಗುದಣದಕರ, ರಸ್ತೆ ಸೇತುವೆ, ಪಟ್ಟಣ ಪ್ರವೇಶ ಇನ್ನು ಮುಂತಾದ ಕರಗಳು ಇದ್ದವು."[16]

ಯೆಹೂದ್ಯರ ಪ್ರಕಾರ ಸುಂಕ ವಸೂಲಿ ಮಾಡುವ ತನ್ನ ಜೊತೆಗಾರನು, ಸುಂಕದವನಾದರೇ, ಅವನು ಭ್ರಷ್ಟನೇ,[17] ಹಾಗೂ ಕಳ್ಳನೇ. ಲೂಕ 18ರ ಪ್ರಕಾರ ಆ ಸುಂಕದವನನ್ನು "ಪಾಪಿ" ಎಂದು ಕರೆದಿದ್ದರು (ವಚನ 13). ಅವರೊಂದಿಗೆ ಯಾರು ಸಹವಾದಿಸುವದಿಲ್ಲ (ಲೂಕ 19:5-7). ಸಮಾಜದಲ್ಲಿ ಅವರು ಬಂದು ಅಗೌರವದ ಸ್ಥಾನ ಮಾನವನ್ನು ಹೊಂದಿದ್ದರು.[18] ಇಂಥವರು ನಿಮ್ಮ ನೆರೆವರಾಗುವದಕ್ಕೆ ನೀವು ಒಪ್ಪದೆ ಇರಬಹುದು. ಆದರೂ ಆಶ್ಚರ್ಯವೆಂದರೆ, ಅವನು ಸಹ ಪ್ರಾರ್ಥನೆಗಾಗಿ ದೇವಾಲಯಕ್ಕೆ ಹೋದನು.

ಅವನು ದೇವಾಲಯಕ್ಕೆ ಏಕೆ ಬಂದನೆಂದು ನಾವು ಅರಿಯೆವು. ಅದು ಅವನಿಗೆ ಹವ್ಯಾಸವೂ ಆಗಿರಲಿಲ್ಲ. ಅಧರ್ಮದ ಶೈಲಿವುಳ್ಳವರು ಆರಾಧನೆಗೆ ಬರಲು ಹಿಂಜರಿಯುವರು, ಅದು ಅವರಿಗೆ ಬೇಸರದ ಸಂಗತಿ ಅವನಿಗೆ ತನ್ನ ಪಾಪದ ಅರಿವಾಗಿ, ದೇವರ ಅಗತ್ಯವನ್ನು ಹೊಂದಿದವನಾಗಿ ಬಂದನು. ಒಂದು ವೇಳೆ, ಆಘಾತಗೊಂಡವನಾಗಿ, ಅನಾರೋಗ್ಯದಿಂದ, ಅಥವಾ ಅವನ ಸಂಬಂಧಿಗಳು ಮರಣ ಹೊಂದಿದ್ದರಿಂದ ಮತ್ತು ಹಣವೇ ಸರ್ವಸ್ವವಲ್ಲ ಎಂದು ತಿಳಿದು ಬಂದಿರಬಹುದು. ತನ್ನ ಜೀವನವನ್ನು ಪರಿಶೀಲಿಸಿ, ತಣ್ಣನೆಯ ಕಗ್ಗತಲಯ ನಿದ್ರಾರಹಿತನಾಗಿದ್ದ ಕಾರಣದಿಂದ, ಅಥವಾ ಕಾರಣವಿರಬಹುದು, ಆದರೆ ಅವನು ಪ್ರಾರ್ಥನೆ ಮಾಡಲು ದೇವಾಲಯಕ್ಕೆ ಹೋದನು.

## ಎರಡು ವಿಧವಾದ ಪ್ರಾರ್ಥನೆ

ಈ ಚಿತ್ರಣ ನಿಮ್ಮ ಮನಸ್ಸಿಗೆ ಬರಲಿ:

> ಫರಿಸಾಯನು ಪ್ರಾರ್ಥನಾ ಸಮಯಕ್ಕೆ ಘನತೆಯಿಂದ, ದೇವಾಲಯಕ್ಕೆ ಬಂದಾಗ, ಎಲ್ಲರದೃಷ್ಟಿ ಅವನ ಮೇಲಿತ್ತು. ಅವನು ಇಸ್ರಾಯೇಲ್ಯರ ಅಂಗಳವನ್ನು ದಾಟಿ ಯಜ್ಞವೇದಿ

ಇದ್ದ ಒಳಾಂಗಣಕ್ಕೆ ಹೋದನು. ಅವನು ಎದೆ ಉಬ್ಬಿದವನಾಗಿ ನಿಂತುಕೊಂಡು, ಕೆಲವು ಪರಿಚಯದ ಮಾತುಗಳನ್ನಾಡಿದನು.[19]

ನಂತರದಲ್ಲಿ ಸುಂಕದವನು ನಾಚಿಕೆವುಳ್ಳವನಾಗಿ ಬಂದನು ಅವನು ಬರುವಾಗ ಜನರು ಅವನನ್ನು ಓರೇ ಕಣ್ಣಿನಿಂದ ನೋಡಿದರು. ಕಣ್ಣುಗಳು ದಪ್ಪವಾಗಿ, ಅವರ ತೋಳುಗಳು ಬಲ ವಾಗುತ್ತವೆ. ಜನರು ಅವನಿಂದ ದೂರವಾಗುತ್ತಾರೆ. ಇವನು ಇಲ್ಲೇನು ಮಾಡುತ್ತಿದ್ದಾನೆ? ಎಂದು ಜನರು ಗುಣುಗುಟ್ಟುತ್ತಿದ್ದರು, ಆದರೆ ಅವನು ಒಂದು ಏಕಾಂತ ಸ್ಥಳಕ್ಕೆ ಹೋಗಿ, ಕಣ್ಣನ್ನು ತಗ್ಗಿಸಿ, ಪ್ರಾರ್ಥಿಸಲು ಆರಂಭಿಸುತ್ತಾನೆ.

**ಪ್ರಾರ್ಥನೆ 1: ಫರಿಸಾಯ**

ಈ ಚಿತ್ರಣದ ನೆನಪಿನಲ್ಲಿ, ಆ ಮನುಷ್ಯನ ಕುರಿತು ಯೇಸು ನೀಡಿದ ವಿವರಣೆಯನ್ನು ಗಮನಿಸೋಣ: "ಫರಿಸಾಯನು ನಿಂತುಕೊಂಡು, ತನಗಾಗಿ ಪ್ರಾರ್ಥಿಸಿಕೊಳ್ಳುತ್ತಿದ್ದನು" (ಲೂಕ 18:11ಎ). ಅವನು ನಿಂತನು ಎಂಬ ಸಂಕೇತವಿಲ್ಲದಿದ್ದರೂ, ಪ್ರಾರ್ಥನೆಗಾಗಿ ಅವನು ನಿಂತನು, ಅದು ಸಹಜ ಕ್ರಿಯೆಯಾಗಿತ್ತು (1 ಅರಸು 8:22; ಮಾರ್ಕ 11:25). ಎಲ್ಲರಿಗೂ ಕಾಣಬಹುದಾದ ಸ್ಥಾನದಲ್ಲಿ ಅವನು ಪ್ರಾರ್ಥಿಸಲು ನಿಂತಿದ್ದನು (ನೋಡಿ ಮತ್ತಾಯ 6:5).

"ತನಗಾಗಿ" ಎಂಬುದು ಒಂದು ಗುರುತರವಾದ ಸಂಗತಿ ಮೌನವಾದ ಪ್ರಾರ್ಥನೆ ಎಂದರು ಅದು ಫರಿಸಾಯನು ಮಾಡಿದ ಏರು ಧ್ವನಿಯ ಪ್ರಾರ್ಥನೆಯಾಗಿತ್ತು. ಅವರು ಬಹಳ ಮಾತುಗಳನ್ನಾಡಿದರೆ ತಮ್ಮ ಪ್ರಾರ್ಥನೆಯನ್ನು ದೇವರು ಕೇಳುತ್ತಾನೆಂದು ನೆನಸುತ್ತಾರೆ (ಮತ್ತಾಯ 6:7[21]). KJVಯಲ್ಲಿ ಸಹಜವಾಗಿ ಪ್ರಾರ್ಥನೆಯ ದೇವರ ನಡೆಸುವಿಕೆ ಆದರೂ, ಫರಿಸಾಯನು ತನ್ನ ಚಿತ್ತದಂತೆ ಮಾಡಿದನು.

ಸರಿಯಾದ ರೀತಿಯಲ್ಲಿಯೇ ಪ್ರಾರ್ಥನೆಯು ಆರಂಭವಾಯಿತು: "ಆದದರಿಂದ ನಿನಗೆ ಸ್ತೋತ್ರ ಮಾಡುತ್ತೇನೆ" (ಲೂಕ 18:11ಬಿ). ಅವನು ದೈವತ್ವವನ್ನು ನಂಬಿ ಕೃತಜ್ಞತೆ ಹೇಳಿ ದನು (ಮತ್ತಾಯ 6:9; ಫಿಲಿಪ್ಪಿ 4:6). ತನ್ನ ಪ್ರಾರ್ಥನೆಯನ್ನು ಇಲ್ಲೇ ನಿಲ್ಲಿಸಿದ್ದರೆ "ಅವನು ನೀತಿವಂತನಾಗಿ ಮನೆಗೆ ಹೋಗುತ್ತಿದ್ದನು" (ಲೂಕ 18:14) - ಆದರೆ ಪ್ರಾರ್ಥನೆ ಮುಂದು ವರೆಯಿತು.

ಆತನು ಉಳಿದವರಂತೆ ನಾನಲ್ಲ ಎಂದು ಪ್ರಾರ್ಥಿಸಿದನು (ವಚನಗಳು 11ಬಿ, ಸಿ). ಹೌದು, ಅವನ ಜೀವನ ಇತರರಿಗಿಂತ ಪ್ರಬುದ್ಧವಾಗಿತ್ತು - ಲೋಕವು ಈ ವಿಚಾರವನ್ನು ಅರಿಯಬೇಕೆಂದು ಬಯಸಿದನು. ಅವನ ಮನಸ್ಸಿನಲ್ಲಿದ್ದ ಜನರನ್ನು ಪಟ್ಟಿಮಾಡಿ, ಅವರನ್ನು ಸುಲುಕೊಳ್ಳುವವನೂ, ಅನ್ಯಾಯಗಾರನೂ ಹಾದರ ಮಾಡುವರೂ ಆದ ಜನರಂತೆ ನಾನಲ್ಲ ಅಂದನು (ವಚನ 11ಡಿ). ನಂತರ ಸುತ್ತಲೂ ನೋಡಿದನು. ಸ್ವಲ್ಪ ದೂರದಲ್ಲಿ ಸುಂಕದವನು ನಿಂತಿದ್ದನು. ಆ ಮನುಷ್ಯನು ಸುಂಕದವನೆಂದು ಅವನು ಹೇಗೆ ತಿಳಿದನು ಎಂಬುದು ಒಂದು ಪ್ರಶ್ನೆ. "ನಾನು ಸಂಕದವನು" ಎಂದು ತೋರಲು ಅವನು ಯಾವುದೇ ವಿಧವಾದ ಸಂಖೇತ ಅಥವಾ ಸಮ ವಸ್ತ್ರವನ್ನು ಹೊಂದಿರಲಿಲ್ಲ. ಒಂದು ವೇಳೆ ಅವನು ಫರಿಸಾಯನಿಂದ ಕರ ವಸೂಲಿ ಮಾಡಿರಬಹುದು.[22] ಆದರೆ ಅವನ ಕಡೆಗೆ ಬೆರಳು ಮಾಡಿ, ಈ ಸುಂಕದವನಂತೆ ನಾನಲ್ಲ ಎಂದನು (ವಚನ 11ಇ).

ಆ ಸ್ಥಳದಲ್ಲಿ ಹಾಜರಿದ್ದ ತನ್ನ ಜೊತೆಗಾರನಾದ ಮತ್ತೊಬ್ಬ ಫರಿಸಾಯನ ಕಡೆಗೆ ಬೆರಳು ತೋರದೆ, ಅಥವಾ ದೇವಾಲಯಕ್ಕೆ ಕ್ರಮವಾಗಿ ಬರುವ ಇತರರನ್ನು ತೋರದೆ ಸುಂಕದವನ್ನನ್ನೆ ತೋರಿದನು (ವಚನ 13). ಉತ್ತಮರು ಎಂದು ಭಾವಿಸಿರುವ ಜನರು ಉತ್ತಮರೊಂದಿಗೆ ಹೋಲಿಸಿಕೊಳ್ಳದೆ, ತಮಗಿಂತ ಕೀಳಾಗಿರುವವರ ಸಂಗಡ ಹೋಲಿಸಿಕೊಳ್ಳುವರು. ಇದರ ಕುರಿತು ಗ್ಲೆನ್ ಫೇಸ್‌ರವರು, "ದೃಢವಾಗಿ ದೃಷ್ಟಿಸಿದರೆ, ಹೋಲಿಕೆಯಲ್ಲಿ ನೈತಿಕತೆಯನ್ನು

ಗಮನಿಸಬಹದು"[23] ಎಂದಿರುವರು.

ಅವನು ಮಾಡದೆ ಇದ್ದ ಸಂಗತಿಯನ್ನು ಪಟ್ಟಿ ಮಾಡಿದ ನಂತರ, ತಾನು ಮಾಡಿದ ಸಂಗತಿಗಳ ಪಟ್ಟಿ ಮಾಡಿದನು: "ವಾರಕ್ಕೆ ಎರಡಾವರ್ತಿ ಉಪವಾಸ ಮಾಡುತ್ತೇನೆ. ದಶಮಾಂಶ ನೀಡುತ್ತೇನೆ" (ವಚನ 12). ಅವನು ಮಾಡಿದ ಇತರೆ ಒಳ್ಳೆಯ ಕ್ರಿಯೆಗಳ ಕುರಿತು ಹೇಳಿರಬಹುದು. "ಅವನು ಪ್ರಾರ್ಥಿಸುತ್ತಿದ್ದ" ಅಂದರೆ (ವಚನ 11), ಅವನ ಪ್ರಾರ್ಥನೆ ವ್ಯರ್ಥ ವಾಗಿತ್ತು. "ಅವರು ಕೇವಲ ಉದ್ದ ಪ್ರಾರ್ಥನೆ ಮಾತ್ರ ಮಾಡಿದರು" (ಲೂಕ 20:47).

ಫರಿಸಾಯನ ಪ್ರಾರ್ಥನೆಯಲ್ಲಿ, ಯೇಸುವಿನ ಕೇಳುಗರು ಯಾವದೇ ತಪ್ಪನ್ನು ಕಂಡುಹಿಡಿಯಲಾಗಲಿಲ್ಲ. ಅವನು ಹೇಳಿದ ಮೊದಲ ಅಂಶಗಳು ಯೋಗ್ಯವಾಗಿದ್ದವು. ಅವನ ಸಾಧನೆಯ ಕುರಿತು ನನ್ನ ಸ್ನೇಹಿತನು ಹೇಳುವಂತೆ, "ಅವನ ಕ್ರಿಯೆಗಳನ್ನು ಫರಿಸಾಯನು ವರ್ಣಿಸುತ್ತಿದ್ದನು" ಅವರು ಇತರರಂತೆ ಇರುವದಿಲ್ಲ ಎಂಬುದು ಯೆಹೂದ್ಯರ ಪ್ರಮುಖ ಪ್ರಾರ್ಥನೆಯಾಗಿತ್ತು. ಯೆಹೂದ್ಯರು ತಾನು ಅನ್ಯನು, ದಾಸನು ಅಥವಾ ಸ್ತ್ರೀಯಾಗಿ ಸೃಷ್ಟಿಯಾಗದೇ ಇದ್ದದರಿಂದ ಪ್ರತಿದಿವಸ ದೇವರಿಗೆ ಕೃತಜ್ಞತೆ ಹೇಳುತ್ತಿದ್ದನು.[24]

ಫರಿಸಾಯನ ಪ್ರಾರ್ಥನೆಯಲ್ಲಿ ತಪ್ಪಾದದ್ದೇನು? ಅಲ್ಲಿರುವ ಅನೇಕ ಕೊರತೆಗಳ ಬಗ್ಗೆ ಪಟ್ಟಿಮಾಡಬಹುದು. ಅವನು ಪಾಪ ಪರಿಹಾರದ, ಆತ್ಮೀಕ ಜೀವಿತದ ಹಾಗೂ ಮಾರ್ಗದರ್ಶನ ಪಡೆಯುವ ಪ್ರಾರ್ಥನೆಯನ್ನು *ಸಲ್ಲಿಸಲಿಲ್ಲ*. ಪಕ್ಕದಲ್ಲಿದ ಬಡ ಪಾಪಿಗಳಾಗಿ ಪ್ರಾರ್ಥಿಸಲಿಲ್ಲ. ಎರಡು ವಿಶೇಷ ತಪ್ಪುಗಳನ್ನು ತೋರಲು ಯೇಸು ಈ ಅಂಶವನ್ನು ಒತ್ತಿ ಹೇಳಿರುವನು: (1) ತಾವೇ ನೀತಿವಂತರು ಎಂದು ಹೇಳಿಕೊಳ್ಳುವವರಿಗಾಗಿ ಮತ್ತು (2) ಇತರರನ್ನು ಅಗೌರವಿಸುವದು (18:9).

ಮೊದಲನೆಯದಾಗಿ, ತನ್ನಲ್ಲಿ ಭರವಸೆ ಇಟ್ಟುಕೊಂಡವನು. ಮೊದಲ ಹಂತದಲ್ಲಿ ದೈವತ್ವವನ್ನು ಒಪ್ಪಿಕೊಂಡರೂ, ದೇವರಲ್ಲಿ ಭರವಸವನ್ನು ಇಡಲಿಲ್ಲ - ತನ್ನನ್ನೇ ಹೆಚ್ಚಿಸಿಕೊಂಡನು (ವಚನ 14).

ದೇವರ ಚಿತ್ತವನ್ನು ಯಥಾರ್ಥವಾಗಿ ನೆರವೇರಿಸುವದರಲ್ಲಿ ತಪ್ಪಿನ ಅಂಶವಿರುವದಿಲ್ಲ (ಲೂಕ 6:46). ಉಪವಾಸ ದಶಮಾಂಶ ನೀಡುವ ಎರಡನೆ ಸಂಗತಿಯಲ್ಲೂ ತಪ್ಪಿರುವದಿಲ್ಲ[25] (ಮತ್ತಾಯ 22:23). ಆದರೆ ತಾನು ಮಾಡಿದ ಕೃತ್ಯಗಳಿಂದ ದೇವರನ್ನು ತನ್ನೆಡೆಗೆ ಸೆಳೆಯಬಹುದು ಎಂಬದು ತಪ್ಪಾಗಿರುತ್ತದೆ. ಹಿಂದಿನ ಪಾಠವನ್ನು ನೋಡಿರಿ: "ನೀವು ನಿಮಗೆ ಅಪ್ಪಣೆಯಾಗಿರುವದನ್ನೆಲ್ಲಾ ಮಾಡಿದ ಮೇಲೆ - ನಾವು ಆಳುಗಳು, ಪ್ರಯೋಜನವಿಲ್ಲದವರು, ಮಾಡಬೇಕಾದದ್ದನ್ನೇ ಮಾಡಿದ್ದೇವೆ ಅನ್ನಿರಿ ಎಂದು ಹೇಳಿದನು" (ಲೂಕ 17:10). ಸ್ವಬುದ್ಧಿ ಯನ್ನೇ ಆಧಾರಮಾಡಿಕೊಳ್ಳದೆ ಪೂರ್ಣಮನಸ್ಸಿನಿಂದ ಯೆಹೋವನಲ್ಲಿ ಭರಸವಿಡು (ಜ್ಞಾನೋಕ್ತಿ 3:5).

ಎರಡನೆಯದಾಗಿ, ಫರಿಸಾಯನು ಮತ್ತೊಬ್ಬನನ್ನು ಅಗೌರವದಿಂದ ಕಂಡನು (ಲೂಕ 18:9). ಅವನು "ಉಳಿದ ಜನರಂತೆ ನಾನಲ್ಲಾ" ಎಂದು ಪ್ರಾರ್ಥಿಸಿದನು. ಅದಕ್ಕಾಗಿ ಸ್ತೋತ್ರ ಮಾಡುತ್ತೇನೆ ಅಂದನು (ವಚನ 11). ನನ್ನ ಗ್ರೀಕ್ ಭಾಷೆಯ ಇಂಟರ್ ಲೀನಿಯರ್ ಬೈಬಲಿನ ಪ್ರಕಾರ, "ಬೇರೆಯವರ ಹಾಗೆ ನಾನಿರವದಿಲ್ಲ" ಅಂದರೆ "ನಾನು ಹಾಗೂ ನನ್ನ ಜೊತೆ ಫರಿಸಾಯರು ಮಾತ್ರ ನಂತರ ಅವನು ತನ್ನ ತುಟಿಯನ್ನು ತಿರುವಿರಬಹುದು."

ಫರಿಸಾಯನು, ಇತರರಿಗಿಂತಲೂ ಉತ್ತಮ ಸ್ಥಿತಿಯಲ್ಲಿರಬಹುದು. ದೇವರ ನಿಯಮಗಳನ್ನು ಪಾಲಿಸಲು ಬಹು ಪ್ರಯತ್ನ ಮಾಡಿರಬಹುದು. ಆದರೆ ತಾನು ಪ್ರಾರ್ಥಿಸುತ್ತಿದ್ದ ದೇವರಿಗೆ ತನ್ನನ್ನು ಹೋಲಿಸಿದರೆ ಇವನು ಅಯೋಗ್ಯನೇ: "ನೀತಿವಂತರು ಇಲ್ಲಾ ಒಬ್ಬನಾದರೂ ಇಲ್ಲ" (ರೋಮಾಪುರ 3:10).

ಒಂದು ದೃಷ್ಟಾಂತದ ನೆನಪು ಬರುತ್ತದೆ: ನಾವಿರುವ ದೇಶದಲ್ಲಿ ಕೆಂಪು ಇರುವೆಗಳನ್ನು ಹೆಚ್ಚಾಗಿ ಕಾಣುತ್ತೇವೆ. ಕೆಲವು ಕಾಲು ಇಂಚು ಉದ್ಧವಿರುತ್ತವೆ.[26] ಚಿಕ್ಕದಾದ

ಕಪ್ಪು "ಇರುವವುಗಳು" ಇಂಚಿನ ಒಂದು ಅಂಶವಿರುವತ್ತವೆ. ಕೆಲವು ಸಾರಿ ಅವುಗಳು ಆಹಾರಕ್ಕಾಗಿ ಮನೆಗೆ ನುಗ್ಗುತ್ತವೆ.[27] ಸಕ್ಕರೆಯೊಂದಿಗೆ ಕೆಂಪು ಇರುವೆ ಬದಿಯಲ್ಲಿ ನಿಂತಿರುವದನ್ನು ಊಹಿಸಿರಿ. (ವಿಶೇಷ ಊಹೆ ಇರಲಿ) ಕೆಂಪು ಇರುವೆ "ಕರ್ತನೆ ನಿನಗೆ ಸ್ತೋತ್ರ" ನಾನು ಆ ಕಪ್ಪು ಇರುವೆಯಂತೆ ಇರವದಿಲ್ಲ, ನಾನು ಆಕಾರದಲ್ಲಿ ದೊಡ್ಡವನೂ, ಶಕ್ತಿವಂತನೂ, ಸುಂದರನೂ, ಆಗಿರುವೆನು ಎಂದು ಹೇಳಬಹುದು. ಆಗ ಒಬ್ಬ ಹುಡುಗನು ಅವೆರಡನ್ನು ಇರುವೆಗಳಿಗಿಂತ ದೊಡ್ಡವನಲ್ಲವೇ. ಕೆಂಪು ಇರುವೆ, ಚಿಕ್ಕ ಇರುವೆಗಿಂತ ದೊಡ್ಡದಾದರೂ, ಹುಡುಗನಿಗೆ ಹೋಲಿಸಿದರೆ, ಅವುಗಳು ಅತಿ ಚಿಕ್ಕ ಕ್ರಿಮಿಗಳಲ್ಲವೇ. ನಮ್ಮನ್ನು ದೇವರಿಗೆ ಹೋಲಿಕೆ ಮಾಡುವದಾದರೆ ನಾನು "ಏನೂ ಅಲ್ಲದವರಾಗಿದ್ದೇವೆ" (ದಾನಿಯೇಲ 4:35). "ಇತರರನ್ನು ಉದಾಸೀನ ಮಾಡುವದು ಮೂರ್ಖತನವಲ್ಲವೇ"!

**2ನೇಯ ಪ್ರಾರ್ಥನೆ: ಸುಂಕದವನ ಪ್ರಾರ್ಥನೆ**

ಸುಂಕದವನ ತಗ್ಗಿದ ಪ್ರಾರ್ಥನೆಯೊಂದಿಗೆ ಯೇಸು ಫರಿಸಾಯನ ಒರಟಾದ ಪ್ರಾರ್ಥನೆಯನ್ನು ಹೋಲಿಸಿದನು, "ಆದರೆ ಸುಂಕದವನು ದೂರದಲ್ಲಿ ನಿಂತನು" (ಲೂಕ 18:13ಎ). ಅವನು ಪ್ರಾರ್ಥಿಸಿ ಹಾಗೂ ದೇವಾಲಯಕ್ಕೆ ಬೇಟಿ ನೀಡಿ ಅನೇಕ ದಿವಸಗಳಾಗಿದ್ದವು. ಅವನು ಆಕಾಶದ ಕಡೆಗೆ ಕಣ್ಣೆತ್ತಿ ನೋಡುವದಕ್ಕೂ ಮನಸ್ಸಿಲ್ಲದೆ ಇದ್ದನು (ವಚನ 13ಬಿ). ಕೆಲವರು ಮೇಲಕ್ಕೆ ನೋಡಿ ಪ್ರಾರ್ಥಿಸುತ್ತಾರೆ (ಕೀರ್ತನೆ 123:1, 2). ಸುಂಕದವನು ಪಾಪದ ಬಾರ ಹೊತ್ತವನಾಗಿ, ತಲೆ ತಗ್ಗಿಸಿ ನಿಂತನು.[28] ಅವನು ಎದೆ ಬಡುಕೊಂಡನು (ಲೂಕ 18:13ಸಿ). ಮೂಡಣದವರ ಪ್ರಕಾರ, "ಅತಿಯಾದ ದುಃಖದಿಂದ" (ಒತ್ತಿ ಹೇಳಿದ್ದು ನನ್ನದು 2:7; ಲೂಕ 23:48).[29] ಅವನ ಪ್ರಾರ್ಥನೆಗೆ ಮನ್ನಣೆ ಇದೆ ಎಂದು ಅವನು ನಂಬಲಿಲ್ಲ.

ಫರಿಸಾಯನಂತೆಯೇ ಅವನೂ ಸಹ, ದೇವರಲ್ಲಿ ಸ್ವಾರ್ಥದಿಂದ ಪ್ರಾರ್ಥಿಸಿದನು. ಆದರೆ ಅದರಲ್ಲಿ ವ್ಯತ್ಯಾಸವಿತ್ತು. ಅವನ ಪ್ರಾರ್ಥನೆ ಕೇವಲ ಏಳು ಪದಗಳನ್ನು ಒಳಗೊಂಡಿತ್ತು.[30] "ದೇವರೇ ಪಾಪಿಯಾದ ನನ್ನನ್ನು ಕರುಣಿಸು" (18:13ಡಿ).

ಫರಿಸಾಯನಂತೆ, ಸುಂಕದವನು ತನ್ನ ಯೋಗ್ಯತೆಗಳ ಪಟ್ಟಿ ಮಾಡಲಿಲ್ಲ. ಹೇಗೂ ಅವನು ಅರ್ಹನಾಗಿದ್ದನು. ಅವನು ತನ್ನ ಪಾಪವನ್ನು ಒಪ್ಪಿ ಧೈರ್ಯವಾಗಿ ಅರಿಕೆಮಾಡಿದನು.[31] ತಾನು ಪಾಪಿ ಎನ್ನುವದಕ್ಕಿಂತಲೂ ಹೆಚ್ಚಿನದವನ್ನೇ ಹೇಳಿದನು. KJV ಗ್ರೀಕ್ ಅನುವಾದದಲ್ಲಿ, "ಪಾಪಿ" NASBಯಲ್ಲಿ ಮೊದಲು ಇನ್ನೊಂದು ಪದವಿದೆ. "ನಾನೊಬ್ಬನೇ ಪಾಪಿ, ನನ್ನನ್ನು ಕರುಣಿಸು" ಸಕಲರಿಗಿಂತಲೂ ದೊಡ್ಡ ಪಾಪಿ, ಪೌಲನ ಹಾಗೆ ತಾನು "ಮಹಾಪಾಪಿ" ಎಂದನು (1 ತಿಮೋಥೆ 1:15).[32]

ಎಲ್ಲರೂ ಪಾಪಿಗಳು ಎಂಬ ವಿಚಾರದಲ್ಲಿ ಅವನಿಗೆ ಆಸಕ್ತಿ ಇರಲಿಲ್ಲ (ರೋಮಾಪುರ 3:23). ತನ್ನನ್ನು ಹೋಲಿಸಿಕೊಳ್ಳಲು ತನಗಿಂತ ಕೆಟ್ಟ ಪಾಪಿ ಮತ್ತೊಬ್ಬನಿರಲಿಲ್ಲ. ನೀತಿವಂತನಾದ ಫರಿಸಾಯನಂತೆಯೂ ನಾನಲ್ಲ ಎಂದು ಪ್ರಾರ್ಥಿಸಲಿಲ್ಲ. ದೇವರ ಸನ್ನಿಧಾನದಲ್ಲಿ ನಿರೀಕ್ಷೆ ಕಳಕೊಂಡವನಂತಿದ್ದನು. ಪ್ರವಾದಿಯಾದ ಯೆಶಾಯನು, ಸಿಂಹಾಸನದಲ್ಲಿ ಕುಳಿತಿರುವ ಕರ್ತನನ್ನು ಕಂಡು, "ಅಯ್ಯೋ ನನ್ನ ಗತಿಯನ್ನು ಏನು ಹೇಳಲಿ, ನಾನು ಹೊಲಸು ತುಟಿಯವನು, ಹೊಲಸು ತುಟಿಯವರ ನಡುವೆ ಜೀವಿಸುವವನು" ಅಂದನು (ಯೆಶಾಯ 6:1, 5).

ಸುಂಕದವನು ಐಶ್ವರ್ಯ, ಪ್ರಖ್ಯಾತಿ, ಯಶಸ್ವಿ, ಒಳ್ಳೆಯ ಅರೋಗ್ಯ ಅಥವಾ ಜೀವನದ ಅಗತ್ಯಗಳಿಗಾಗಿ ಬೇಡಿಕೊಳ್ಳದೆ, ಕರುಣೆಗಾಗಿ ಬೇಡಿಕೊಂಡನು "ಕರುಣೆ ತೋರು" ಕರುಣೆಗೆ, ಗ್ರೀಕ್ ಅನುವಾದವಿಲ್ಲ. "ಸತ್ಯವೇದದ ಭಾಷೆಯು ಪ್ರಸ್ತುತ ಬರಹಗಾರಿಗೆ ಅಪರಿಚಿತವಾಗಿರುವದರಿಂದ" ಒಲಿಸಿಕೊ[33] ಎಂಬ ಪದವನ್ನು ಬಳಸಿದ್ದಾರೆ.

"ಒಪ್ಪಿಕೋ" ಎಂದರೆ, ಲ್ಯಾಟಿನ್ ಭಾಷೆಯ "ಮೆಚ್ಚಿಸಿಕೋ," ಆ ಪದದ ಪೂರ್ಣ ಅಧ್ಯಯನಕ್ಕೆ ಸಮಯ ಸಾಲದು. ಆದರೆ ಅದರಲ್ಲಿ "ಒಡಂಬಡಿಕೆ" ಎಂಬ ಪದವು

ಒಳಗೊಂಡಿದೆ. ದೇವರ ಸ್ವಭಾವವು ಪಾಪವನ್ನು ಸಹಿಸದು (ರೋಮಾಪುರ 1:18). ಪಾಪಕ್ಕೆ ತಕ್ಕ ಶಿಕ್ಷೆಯಾಗಬೇಕು (ರೋಮಾಪುರ 6:23ಎ; ಗಲಾತ್ಯ 6:7). ದೇವರ ಕೋಪವನ್ನು ಮನುಷ್ಯನು ತಡೆ ಹಿಡಿಯಲಾರನು (ರೋಮಾಪುರ 1:18; 3:9, 10; ಯೆಶಾಯ 64:6), ದೇವರು ಒಡಂಬಡಿಕೆಯ ಯಜ್ಞವನ್ನು ಸಮರ್ಪಿಸಿದ್ದಾನೆ ಹಳೇ ಒಡಂಬಡಿಕೆಯಲ್ಲಿ ಪಶುಗಳ ಯಜ್ಞವನ್ನು ಅರ್ಪಿಸುತ್ತಿದ್ದರು (ಯಾಜಕಕಾಂಡ 1; 3-5; ನೋಡಿ ಇಬ್ರಿಯ 9:22). ಹೊಸ ಒಡಂಬಡಿಕೆಯಲ್ಲಿ ಪಾಪಕ್ಕಾಗಿ ಯೇಸು ತಾನೇ ಪರಿಪೂರ್ಣ ಯಜ್ಞವಾಗಿ ಕ್ರೂಜೆಯಲ್ಲಿ ಸಮರ್ಪಿಸಲ್ಪಟ್ಟನು (1 ಕೊರಿಂಥ 15:3).

ಪಾಪಕ್ಕಾಗಿ ದೇವಾಲಯದ ಯಜ್ಞವೇದಿಯಲ್ಲಿ ಪಶುಗಳನ್ನು ಅರ್ಪಿಸುವ ಸಂಗತಿಯು ಸುಂಕದವನ ಮನಸ್ಸಿಗೆ ಬಂದಿರಬಹುದು.[34] ತನ್ನ ಆಳವಾದ ಪಾಪದ ಅರಿವು ಅವನಿಗಾದ್ದರಿಂದ, ಅವನು ಘೋರ ಪಾಪಿ ಎಂಬ ಹೇಳಿಕೆಯನ್ನು ನೀಡಿದನು,[35] ಮತ್ತು ಅವನಿಗೆ ಪಾಪಕ್ಷಮೆಯ ಅಗತ್ಯವಿತ್ತು. ಅವನು ಪಾಪ ಪ್ರಜ್ಞೆಯ ಭಾರ ಹೊಂದಿದ್ದರಿಂದ (ನೋಡಿ ಕೀರ್ತನೆ 40:12), ಹಗುರ ಪಡಿಸಿಕೊಳ್ಳುವದಕ್ಕಾಗಿ: "ದೇವರೇ ಪಾಪಿಯಾದ ನನ್ನನ್ನು ಕರುಣಿಸು ಎಂದು ಬೇಡಿದನು!" (ಲೂಕ 18:13).

"ನಾವು ಪ್ರತಿಯೊಬ್ಬರು ಪಾಪ ಮಾಡಿ ದೇವರ ಮಹಿಮೆಯನ್ನು ಕಳಕೊಂಡಿದ್ದೇವೆ" (ರೋಮಾಪುರ 3:23). ನಮ್ಮಲ್ಲಿ ಪಾಪವಿಲ್ಲವೆಂದರೆ ನಾವು ದೇವರನ್ನೇ ಸುಳ್ಳುಗಾರನನ್ನಾಗಿ ಮಾಡುತ್ತೇವೆ, "ಆತನ ವಾಕ್ಯವು ನಮ್ಮಲ್ಲಿ ಇರುವದಿಲ್ಲ" (1 ಯೋಹಾನ 1:10), ಮರಣಕ್ಕೆ ತುತ್ತಾಗಿದ್ದೇವೆ ಅದು ದೇವರಿಂದ ಪ್ರತ್ಯೇಕವಾದ ನಿತ್ಯತ್ವ (ರೋಮಾಪುರ 6:23ಎ; ಪ್ರಕಟಣೆ 20:14). ದೇವರ ಪರಿಶುದ್ಧತೆಗನುಗುಣವಾಗಿ, "ದೇವರೇ ಪಾಪಿಗಳಾದ ನಮ್ಮನ್ನು ಕರುಣಿಸು ಎಂದ ಬೇಡಬಹುದು."

## ಎರಡು ಸಾಧ್ಯತೆಗಳು

ಅಂತಿಮದಲ್ಲಿ ಯೇಸು ಅಧಿಕಾರಯುತವಾಗಿ ಮಾತಾಡಿ "ನಾನು ನಿಮಗೆ ಹೇಳುತ್ತೇನೆ" ಅಂದನು (ಲೂಕ 18:14ಎ). ಹೃದಯವನ್ನು ನೋಡಿದವನು ಮಾತ್ರ, ದೇವರನ್ನು ಅರಿತವನು ಮಾತ್ರ "ನಾನು ನಿಮಗೆ ಹೇಳುತ್ತೇನೆ" ಎಂದು ಹೇಳಬಹುದಾಗಿದೆ.

### 1ನೇ ಸಾಧ್ಯತೆ: ಫರಿಸಾಯ

ಯೇಸು ಮೊದಲು, ಫರಿಸಾಯನ ಹಾಗೂ ಅವನ ಹಿನ್ನೆಲೆಯನ್ನು ನೋಡಿ, ಅವನ ಪರದ ಮಾತಾಡಿದರೂ, ನಂತರ ಆತನ ಮಾತು ಹಿಂದು ಮುಂದಾಯಿತು: "ಇವನು ನೀತಿವಂತನಾಗಿ ನಿರ್ಣಯಿಸಲ್ಪಟ್ಟವನಾಗಿ ತನ್ನ ಮನೆಗೆ ಹೋದನು, ಆ ಫರಿಸಾಯನು ಅಂಥವನಾಗಿ ಹೋಗ ಲಿಲ್ಲ ಎಂದು ನಿಮಗೆ ಹೇಳುತ್ತೇನೆ ಅಂದನು" (ವಚನ 14ಎ, ಬಿ). ಇತರರ ಬಗ್ಗೆ ಮಾತಾಡಿದ ಫರಿಸಾಯನು ಅವರಂತೆ ಆದನು. ವಚನ 14ರಂತೆ ಫರಿಸಾಯನು ಅನೀತಿವಂತನಾಗಿ ತನ್ನ ಮನೆಗೆ ಹಿಂದಿರುಗಿದನು ಎಂಬ ಅರ್ಥವಾಗಿದೆ.

ಫರಿಸಾಯನು ಅರ್ಥ ಹೀನ ಪ್ರಾರ್ಥನೆ ಮಾಡಿರುವದನ್ನು ಅರಿಯದೆ, ಸ್ವತೃಪ್ತಿಯನ್ನು ಹೊಂದಿದವನಾಗಿ ದೇವಾಲಯದಿಂದ ಹೊರಟು ಹೋದನು. ಮೈಕಲ್ ವಿಲ್‌ರಾಕ್ರ್‌ರವರ ಪ್ರಕಾರ, "ತನ್ನ ಬೆನ್ನನ್ನು ತನೇ ತಟ್ಟಿಕೊಂಡವನಾಗಿ ಅವನು ಹೋದನು" ದೇವರು ಕಿವಿಕೊಡದಂತ ಪ್ರಾರ್ಥನೆಯನ್ನು ಮಾಡಿದನು.[36] ರಿಚರ್ಡ್ ಟ್ರೆಂಚ್‌ರವರು ಬರೆದು, "ಅವನ ಪ್ರಾರ್ಥನೆಯು ದೂಪದಂತೆ ಮೇಲಿರುವ ಬದಲು, ಹೊಗೆಯಂತೆ ಅದು ಅವನ ಕಣ್ಣಿಗೆ ಬಿದ್ದಿತು."[37]

ಅವನಲ್ಲಿ, ಅವನೇ ತುಂಬಿಕೊಂಡದ್ದರಿಂದ, ಅವನ ಹೃದಯದಲ್ಲಿ ದೇವರಿಗೆ ಸ್ಥಾನ ದೊರಕಲಿಲ್ಲ. R. C. H. ಲೆನ್‌ಸ್ಕಿ ಪ್ರಕಾರ, "ದೇವರು ಆ ಪಾತ್ರೆಯನ್ನು ಕಂಠದ ಮಟ್ಟಿಗೆ

ತುಂಬಿಸಲು ಆಗಲಿಲ್ಲ."[38] ದೇವರ ಮುಂದೆ ಫರಿಸಾಯನಿಗೆ ಎಂಥಹ ಅಘಾತವಾಗಿರಬಹುದು, "ತನ್ನನ್ನು ಹೆಚ್ಚಿಸಲ್ಪಡುವವನು, ತಗ್ಗಿಸಲ್ಪಡುವನು" (ವಚನ 14ಸಿ)!

**2ನೇ ಸಾಧ್ಯತೆ: ಸುಂಕದವನು**

ಪ್ರಾರ್ಥಿಸಿದ ಸುಂಕದವನ ವಿಚಾರವೇನು, "ಅವನು ದೇವರೇ ಪಾಪಿಯಾದವನನ್ನು ಕರುಣಿಸು" ಎಂದು ಪ್ರಾರ್ಥಿಸಿದ್ದನು? ಅವನು ನೀತಿವಂತನಾಗಿ ತನ್ನ ಮನೆಗೆ ಹೋದನು (ವಚನ 14). ಅವನ ದ್ರೋಹ ಅಳಿಸಲ್ಪಟ್ಟಿತು, ಅವನ ಪಾಪ ಪೂರ್ಣವಾಗಿ ತೊಳೆಯಲ್ಪಟ್ಟಿತು; ಅವನ ದೋಷ ಪರಿಹಾರವಾಗಿತ್ತು (ಕೀರ್ತನೆ 51:1, 2). "ಅವನ ಪಾಪವು ಪೂರ್ವಕ್ಕೂ ಪಶ್ಚಿಮಕ್ಕೂ ಎಷ್ಟು ದೂರವೂ ಅಷ್ಟು ದೂರ ಹೋಗಿತ್ತು" (ಕೀರ್ತನೆ 103:12). "ಫರಿಸಾಯನು ಹೆಮ್ಮೆಯಿಂದ ಹಿಂದಿರುಗಿದ್ದು, ಅದರಲ್ಲಿ ಅವನು ತೃಪ್ತನಾಗಿದ್ದನು. ಸುಂಕದವನು ತೃಪ್ತ ಹೊಂದಿ, ಸಮಾಧಾನದಿಂದ ಹಿಂದಿರುಗಿದ್ದನು."[39]

ಕ್ಯಾಂಬೆಲ್ ಮಾರ್ಗನ್‌ರವರು, "ಈ ಮನುಷ್ಯನು ಮರುದಿನ ದೇವಾಲಯಕ್ಕೆ ಬಂದಾಗ, ಹಿಂದಿನ ದಿನದಲ್ಲಿದ್ದಂತೆ ಬರಲಿಲ್ಲ."[40] ಮೊದಲು ಅವನು ಪಾಪದ ಭಾರದಿಂದ ಬಂದಿದ್ದನು. ಎರಡನೇ ದಿನ, ಅವನು ಕ್ಷಮಾಪಣೆ ಹೊಂದಿದವನಾಗಿ ಕೃತಜ್ಞತೆಯಿಂದ ಬಂದಿದ್ದನು. ತಗ್ಗಿದವನಾದ ಅವನು ಹೆಚ್ಚಿಸಲ್ಪಟ್ಟನು (ಲೂಕ 18:14).

## ಮುಕ್ತಾಯ

ಇದು ಹೊಸ ಪ್ರಶ್ನೆಯ ಸಮಯ - ಆ ಪ್ರಶ್ನೆಗೆ ನಾನಾಗಲೀ ಅಥವಾ ನೀನಾಗಲೀ ಉತ್ತರ ನೀಡಲು ಸಾಧ್ಯವಿಲ್ಲ:

- ಈ ಕಥೆಯಲ್ಲಿ ಎರಡು ವ್ಯಕ್ತಿತ್ವಗಳಿವೆ. ಅದರಲ್ಲಿ ನೀನು ಯಾವದು? ರಕ್ಷಣೆ ಅಗತ್ಯವಿಲ್ಲ ಎಂಬುವವರನ್ನು ಕರ್ತನು ರಕ್ಷಿಸಲಾರನು.
- ಈ ಕಥೆಯಲ್ಲಿ ಎರಡು ಪ್ರಾರ್ಥನೆಳಿವೆ. ನಿನ್ನ ಪ್ರಾರ್ಥನೆಗೆ ಸಮೀಪವಾಗಿರುವ ಪ್ರಾರ್ಥನೆ ಯಾವುದು?
- ಈ ಕಥೆಯಲ್ಲಿಎರಡು ಸಾಧ್ಯತೆಗಳಿವೆ: ಹೆಮ್ಮೆಯೇ ಅಥವಾ ತಗ್ಗಿಸುವಿಕೆಯೇ. "ದೇವರ ಮುಂದೆ ನಾನು ನಿಂತಿರುವದಾದರೆ ಈ ಎರಡರಲ್ಲಿ ಯಾವುದನ್ನು ಹೊಂದಿದವರಾಗಿ ನಿಂತಿದ್ದೇವೆ?"

ಗ್ಲೊವಿಸ್ G. ಚಾಪೆಲ್‌ರವರು ಡಾಕ್ಟರ್. ಮೆಕ್‌ಲೂರವರ ಕಥೆಯನ್ನು ಹೇಳಿದ್ದಾರೆ.[41] ರೋಗಿಗಳ ಮಧ್ಯ ಅವರು ನಿಸ್ವಾರ್ಥದ ನಾಲ್ವತ್ತು ವರ್ಷಗಳ ಸೇವೆಯನ್ನು ಮಾಡಿದ್ದರು. ಅವರು ಆಯಾಸದ ಸೇವೆ ಮಾಡಿ ಅಂತ್ಯಕ್ಕೆ ಬಂದಿದ್ದರು. ತನ್ನ ತಾಯಿಯ ಸತ್ಯವೇದದ ಒಂದು ಭಾಗವನ್ನು ಓದಲು ತನ್ನ ಸ್ನೇಹಿತನನ್ನು ಕರೆಕಳುಹಿಸಲು, ಆ ಸ್ನೇಹಿತನು ಯೋಹಾನ 14ರಿಂದ ಓದಲು, ಅನೇಕರಿಗೆ ಸಂತೈಸುವಿಕೆ ಉಂಟಾದರೂ, ಆ ವೈದ್ಯನು ಅಲ್ಲಿಗೆ ನಿಲ್ಲಿಸಲು ಸೂಚಿಸಿ, ಅದನ್ನು ನಾನು ಇಷ್ಟಪಡುವದಿಲ್ಲ ಆದರೆ ಅದು ನನಗೆ ಬಹು ಉತ್ತಮವಾ ದದ್ದು ಅಂದನು. ಕಳೆದ ತಿಂಗಳು ಪ್ರತಿ ರಾತ್ರಿ ನಾನು ಇದೇ ಅಧ್ಯಾಯವನ್ನು ಓದಿರುವೆನು ಅಂದನು. ಅವನ ಸಲಹೆಯಂತೆ ಅವನ ಸ್ನೇಹಿತನು ಲೂಕ 18:13ನ್ನು ಓದಿ: "ಆದರೆ ಆ ಸುಂಕದವನು, ದೂರದಲ್ಲಿ ನಿಂತು ಆಕಾಶದ ಕಡೆಗೆ ಕಣ್ಣೆತ್ತಿ ನೋಡುವದುಕ್ಕೂ ಮನಸ್ಸಿಲ್ಲದೆ ಎದೆಯನ್ನು ಬಡುಕೊಳ್ಳುತ್ತಾ - ದೇವರೇ, ಪಾಪಿಯಾದ ನನ್ನನ್ನು ಕರುಣಿಸು ಅಂದನು!" ಅದನ್ನು ಓದಿದ ನಂತರ, ಜೀವಿತದ ಅಂತ್ಯಕ್ಕೆ ಬಂದಿರುವ ನನ್ನಂಥ ಅಥವಾ ಇತರೆ ಪಾಪಿಗಳಾಗಿ ಈ ವಾಕ್ಯವು ಬರೆಯಲ್ಪಟ್ಟಿದೆ. ಅಂಥವನಾದ ನನ್ನಲ್ಲಿ ನನಗಾಗಿ ಯಾವುದೇ ಒಳ್ಳೆಯ ಮಾತುಗಳಿರುವದಿಲ್ಲ ಅಂದನು. ಲೂಕ 18:13 ಕೇವಲ Dr. ಮೆಕ್‌ಗಾರ್ವೆಗಾಗಿ ಬರೆಯದೆ ನನಗೂ, ನಿನಗೂ ಬರೆಯಲಾಗಿದೆ.

ದೇವರ ಕರುಣೆಯನ್ನು ಬೇಡ ಎನ್ನುವಂಥವರು ಯಾರೂ ಇರುವದಿಲ್ಲ, ದೇವರ ಕರುಣೆಯನ್ನು ಹೊಂದಲಾರದ ನೀಚನು ಯಾರೂ ಇರುವದಿಲ್ಲ. ಆತನ ಆಹ್ವಾನಕ್ಕೆ ಕಿವಿಗೊಡುವವನಾದರೆ,[42] ಆತನ ಬಳಿಗೆ ಬಂದು "ದೇವರೇ, ಪಾಪಿಯಾದ ನನ್ನನ್ನು ಕರುಣಿಸು!" ಎಂದು ಪ್ರಾರ್ಥಿಸು.

---

## ಮಾಹಿತಿ

ಇದನ್ನು ಫರಿಸಾಯ ಹಾಗೂ ಸುಂಕದವನ ಸಾಮ್ಯ ಅಥವಾ ಫರಿಸಾಯ ಹಾಗೂ ಸಾಮಾನ್ಯ ವ್ಯಕ್ತಿಯ ಸಾಮ್ಯ ಎಂದು ಕರೆಯಬಹುದು. ಕ್ಲೋ ವೀಸ್ ಚಾಪೆಲ್‌ರವರು, "ಸಾರ್ವತ್ರಿಕ ಪ್ರಾರ್ಥನೆ" ಎಂದು ಕರೆದಿರುವರು.

---

ಟಿಪ್ಪಣೆಗಳು

[1]ಫರಿಸಾಯ ಹಾಗೂ ಸುಂಕ ಅಥವಾ ಸಾಮಾನ್ಯ ವ್ಯಕ್ತಿಯ ಸಾಮ್ಯ. [2]ಲೂಕ 18:14ಬಿ ಯೇಸು ಸತ್ಯವನ್ನು ಒತ್ತಿ ಹೇಳುತ್ತಿರುವನು (ನೋಡಿ ಲೂಕ 14:11; ಮತ್ತಾಯ 23:12). [3]ಸಾಮಾನ್ಯ ಸಾಮ್ಯ. [4]ಹತ್ತಿರಲ್ಲಿದ್ದವರು ಆಲಯಕ್ಕೆ ಹೋದರೆ, ದೂರವಿದ್ದವರು ದೂರದಿಂದಲೇ ಪ್ರಾರ್ಥಿಸುತ್ತಿದ್ದರು. [5]ಕೆಲವರು ದಿವಸಕ್ಕೆ ನಾಲ್ಕು ಸಾರಿ ಸೇರಿ ಬಂದರೆ, ಸಮಯ ದೊರೆತಾಗಲೂ ಹೋಗಬಹುದಿತ್ತು. [6]*ಕ್ರಿಸ್ತನ ಜೀವನ ಚರಿತ್ರೆ, 1ನ್ನು* ಪಸ್ತಕದ ನಕ್ಷೆ ನೋಡಿರಿ. [7]ಫರಿಸಾಯರ ಕುರಿತ ಚರ್ಚೆಗೆ "ಕ್ರಿಸ್ತನು ಆಗಮಿಸಿದ ಲೋಕ" ಎಂಬ ಪಾಠವನ್ನು *ಕ್ರಿಸ್ತನ ಜೀವನ ಚರಿತ್ರೆ, 1ನೇ* ಪುಸ್ತಕದಲ್ಲಿ ನೋಡಿ. [8]ಪರಿಶುದ್ಧಾತ್ಮನು ತಾನೇ ಫರಿಸಾಯರ ನಕರಾತ್ಮಕ ವಿಚಾರವನ್ನು ಪ್ರಕಟಿಸಿದ್ದಾನೆ (c. ಕ್ರಿ.ಶ. 60-65). ಅವರು ಸಭೆಗೆ ಪ್ರಮುಖ ವಿರೋಧಿಗಳಾಗಿದ್ದರು (ಅಪೊಸ್ತಲರ ಕೃತ್ಯಗಳು 15:5; 23:6). [9]ಪ್ರಾಯಶಃ ಸಹಜ ಹಾಗೂ ಅಸಹಜವಾಗಿರಬಹುದು. [10]ಯೇಸುವನ್ನು ಹೊರತು ಪಡಿಸಿ ಇತರರು, ಫರಿಸಾಯರೂ ಸಹ ನಿಯಮಗಳನ್ನು ಸರಿಯಾಗಿ ಪಾಲಿಸಲಿಲ್ಲ.

[11]ಉಪವಾಸದಿಂದ ತಮ್ಮನ್ನು ಬಾಧಿಸಿಕೊಂಡರು. ಯೆಹೂದ್ಯರು ಉಪವಾಸದ ಹೆಚ್ಚಿನ ನಾಲ್ಕು ದಿವಸಗಳನ್ನು ನೇಮಿಸಿಕೊಂಡರು. [12]ಪ್ರೇರಿತವಲ್ಲದ ಬರಹದ ಪ್ರಕಾರ ಮೋಶೆ ಸೋಮವಾರದಂದು ಬೆಟ್ಟವನ್ನು ಏರಿ ಗುರುವಾರ ದಂದು ಇಳಿದನು. [13]ಆಸ್ಟ್ರೇಲಿಯದಲ್ಲಿ "ಪಬ್ಲಿಕನ್" ಅಂದರೆ ಮದ್ಯಪಾನದ ಅಂಗಡಿಯವನು ಎಂದಿರುವನು. ಒಂದು ಭಾನುವಾರ "ಪಬ್ಲಿಕನ್" ಬಗ್ಗೆ ಪ್ರಸಂಗ ಮಾಡುವಾಗ ಒಬ್ಬ ಹೆಂಗಸು ಸಿಟ್ಟಾದಳು. ಯಾಕೆಂದರೆ ಆಕೆಯ ಯಜಮಾನ "ಪಬ್ಲಿಕನ್" ಆಗಿದ್ದನು. [14]"IRS"ಎಂದರೆ "ಇಂಟರ್‌ನಲ್ ರೆವೆನ್ಯೂ ಸರ್ವಿಸ್" ಅಮೇರಿಕೆಯ ಏಜೆನ್ಸಿ. [15]William Barclay, *And Jesus Said* (Philadelphia: Westminster Press, 1970), 101. [16]Neil R. Lightfoot, *The Parables of Jesus,* Part 2 (Austin, Tex.: R. B. Sweet Co., 1965), 46. [17]ವೈರಿಗೆ ಮಾರಲ್ಪಟ್ಟವನು (ರೋಮಾ ಸರ್ಕಾರ). [18]ಯೇಸು ಸುಂಕದವರ ಹಾಗೂ ಪಾಪಿಗಳ ಸ್ನೇಹಿತನು ಎಂದು ಜನರು ತಿಳಿದಿದದರು (ಮತ್ತಾಯ 11:19). [19]Lightfoot, 46. [20]Clovis G. Chappell, *Sermons from the Parables* (New York: Abingdon-Cokesbury Press, 1933), 106 ರಿಂದ ಈ ವಾಕ್ಯವನ್ನು ಆರಿಸಿಕೊಳ್ಳಲಾಗಿದೆ.

[21]ನೋಡಿ ಮತ್ತಾಯ 6:7ರಲ್ಲಿ ಫರಿಸಾಯನು, ಅನ್ಯನಂತೆ ವರ್ತಿಸಿದನು. [22]ದೇವರು ಯಾರ ಬಗ್ಗೆ ಮಾತನಾಡುವನೆಂದು ತಾನು ಅರಿತ್ತಿದ್ದನು. [23]Glen Pace, "The Universal Prayer," sermon preached at the Judsonia church of Christ, Judsonia, Arkansas, 2000. [24]Geoffrey W. Bromiley, gen. ed., "Woman," *The International Standard Bible Encyclopedia*, rev. (Grand Rapids, Mich.: Wm. B. Eerdmans Publishing Co., 1988), 4:1093-94. [25]ಮತ್ತಾಯ 5:41. [26]ಕೆಂಫ ಇರುವೆಗಳು ಒಂದು ಅಂಗುಲ ಉದ್ಧವಿರುತ್ತದೆ. [27]ಇದು ಅವೈಜ್ಞಾನಿಕ ಚಿಂತನೆ. [28]ಕಣ್ಣುತೆರೆದು ಸಹ ಪ್ರಾರ್ಥಿಸಬಹುದು. ತಲೆತಗ್ಗಿಸಿ ಪ್ರಾರ್ಥಿಸುವದ ದೈನ್ಯತೆ. [29]"ಅವನಿಗೆ ಕೊಡಬೇಕಾಗಿದ್ದಂತ ದೇವರ ದಂಡನೆಯ ಕುರಿತು ಅವನಿಗೆ ಜ್ಞಾಪಿಸಲಾಗಿದೆ" ಎಂದು J. W. McGarvey ರವರು ಸಲಹೆ ಕೊಟ್ಟರು (J. W. McGarvey and Philip Y. Pendleton, *The Fourfold Gospel or A Harmony of the Four Gospels* [Cincinnati: Standard Publishing Co., 1914], 537).

ಇದೊಂದು ಸಂಕೇತಿಕ ಕ್ರಿಯೆಯಾಗಿರಬಹುದು, ನಿಜವಾಗಿ ಗಾಯವನ್ನು ಉಂಟುಮಾಡಿದ್ದಲ್ಲ. ಹಲವು ಮತಗಳಲ್ಲಿ ತಮ್ಮ ಶರೀರಕ್ಕೆ ಗಾಯಗಳನ್ನುಂಟು ಮಾಡಿಕೊಳ್ಳುವ ಪದ್ಧತಿಗಳನ್ನು ಇದು ನ್ಯಾಯಬದ್ಧ ಗೊಳಿಸುವುದಿಲ್ಲ. ಶರೀರವು ದೇವರ ಆಲಯವಾಗಿದೆ (1 ಕೊರಿಂಥ 6:19) ಮತ್ತು ಅದನ್ನು ದುರುಪಯೋಗ ಪಡಿಸಬಾರದು. [30]ಗ್ರೀಕ್‌ನಲ್ಲಿ ಪ್ರಾರ್ಥನೆಯ ಐದು ಪದಗಳು ಮಾತ್ರ.

[31]Glen Pace ಅವರು ತನ್ನ ಹತ್ತಿರ ಬಂದ ಒಬ್ಬ ಸ್ತ್ರೀ "ಆಕೆಯ ಪಾಪಗಳನ್ನು ಒಪ್ಪಿಕೊಂಡು" ಮತ್ತು ಪ್ರಾರ್ಥನೆಯನ್ನು ಕೇಳಲು ಬಂದವಳ ಕುರಿತು ಹೇಳಿದರು. ಆಕೆಯು ಏನಕ್ಕೆ ಬಂದಳು ಎಂಬುದರ ಬಗ್ಗೆ ಸುವಾರ್ತಿಕನಿಗೆ ಹೇಳುವಾಗ, ಆಕೆಯು ಅಲ್ಲಿರುವ ಗುಂಪಿನಲ್ಲಿನ ಮತ್ತೊಬ್ಬ ಸ್ತ್ರೀಯನ್ನು ತೋರಿಸಿ ಎಲ್ಲರು ಕೇಳುವ ಹಾಗೆ "ಆದರೆ ಎಲ್ಲವು ಆಕೆಯಿಂದಾದ ತಪ್ಪುಗಳೇ!" ಎಂದು ಕಿರುಚಾಡಿದಳು. [32]1 ತಿಮೋಥೆ 1:15 KJV "ಮುಖ್ಯ ಪಾಪಿ" [33]NASB ಅನುವಾದ, "*Or, propitious*." [34]ಹಿಂದಿನ ಚರ್ಚೆಯನ್ನು ನೋಡಿ. [35]ನೋಡಿ ರೋಮಾಪುರ 7:13; KJV. [36]Michael Wilcock, *The Message of Luke: The Saviour of the World,* The Bible Speaks Today Series (Downers Grove, Ill.: Inter-Varsity Press, 1979), 165. [37]Richard C. Trench, *Notes on the Parables of Our Lord* (Westwood, N.J.: Fleming H. Revell Co., 1953), 503. [38]R. C. H. Lenski, *The Interpretation of St. Luke's Gospel* (Minneapolis: Augsburg Publishing House, 1946), 906. [39]Pace. [40]G. Campbell Morgan, *The Parables and Metaphors of Our Lord* (Westwood, N.J.: Fleming H. Revell Co., 1942), 242.

[41]ಈ ಕಥೆಯು *Beside the Bonnie Brier Bush.* Chappell's version is in *Sermons from the Parables,* 113-14 ರಿಂದ ತೆಗೆದುಕೊಳ್ಳಲಾಗಿದೆ. [42]ಮಾರ್ಕ 16:15, 16; ಅಪೊಸ್ತಲರ ಕೃತ್ಯಗಳು 8:22.